1. ಮಂಡ್ಯ ವಿಭಾಗದ ಮಳವಳ್ಳಿ ವಲಯದಲ್ಲಿ 2009–10ನೇ ಸಾಲಿನವರೆಗೆ 6.936 ಕಿ.ಮೀ, 2010–11ನೇ ಸಾಲಿನಲ್ಲಿ 7.50 ಕಿ.ಮೀ, 2011–12ನೇ ಸಾಲಿನಲ್ಲಿ 8.370 ಕಿ.ಮೀ, 2012–13ನೇ ಸಾಲಿನಲ್ಲಿ 9 ಜನವರಿ–2013ರ ಅಂತ್ಯದವರೆಗೆ) 7.5 ಕಿ.ಮೀ ಆನೆ ತಡೆ ಕಂದಕ ಮತ್ತು ಆನೆ ದಾಟಲಾಗದ ಒಂದು ಗೇಟ್‌ನ್ನು ನಿರ್ಮಿಸಲಾಗಿದೆ.

2. 2011–12ನೇ ಸಾಲಿನಲ್ಲಿ 8.22 ಕಿ.ಮೀ ಸೋಲಾರ್ ಬೇಲಿ ನಿರ್ಮಾಣ ಮಾಡಿದ್ದು, 2012–13ನೇ (ಜನವರಿ–2013ರ ವರೆಗೆ) ಸಾಲಿನಲ್ಲಿ 5 ಕಿ.ಮೀ ಸೋಲಾರ್ ಬೇಲಿ ನಿರ್ಮಾಣ ಕಾರ್ಯದಲ್ಲಿ 0.65 ಕಿ.ಮೀ ಸೋಲಾರ್ ಬೇಲಿ ನಿರ್ಮಾಣ ಮುಗಿದಿದ್ದು, ಉಳಿಕೆ 4.350 ಸೋಲಾರ್ ಬೇಲಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

3. ಇದಲ್ಲದೇ ಆನೆಗಳ ಹಾವಳಿಯನ್ನು ತಡೆಗಟ್ಟಲು ಆನೆತಡೆ ಶಿಬಿರಗಳನ್ನು ನಿರ್ಮಿಸಿದೆ ಹಾಗೂ ಆನೆಗಳಿಗೆ ಆಹಾರದ ಕೊರತೆ ನೀಗಿಸಲು ಅರಣ್ಯದಲ್ಲಿಯೇ ಆಹಾರ ಲಭ್ಯವಾಗುವಂತೆ ಬಿದಿರು, ಹಲಸು ಮತ್ತಿತರೆ ಹಣ್ಣಿನ ಗಿಡಗಳನ್ನು ಬೆಳೆಸುವುದರ ಮೂಲಕ ಹಾಗೂ ಆನೆಗಳಿಗೆ ನೀರಿನ ಅಭಾವವಾಗದಂತೆ ಕಾಡಿನಲ್ಲಿನ ಕೆರೆಗಳ ಹೂಳೆತ್ತುವ ಕಾರ್ಯ, ಹೊಸಕೆರೆಗಳ ನಿರ್ಮಾಣ ಹಾಗೂ ಉಪ್ಪಿನ ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ಆನೆಗಳು ನಗರ ಪ್ರದೇಶಕ್ಕೆ ದಾಳಿ ಮಾಡುವುದನ್ನು ನಿಯಂತ್ರಿಸಲು ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿಕೊಂಡು ಆನೆಗಳು ಗ್ರಾಮಗಳ ಕಡೆ ದಾಳಿ ಮಾಡಿದಾಗ ಪಟಾಕಿ ಮತ್ತು ಮದ್ದುಗುಂಡುಗಳನ್ನು ಸಿಡಿಸಿ ಅವುಗಳನ್ನು ಬೆದರಿಸಿ ಕಾಡಿಗೆ ಹಿಮ್ಮೆಟ್ಟಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಕರಡಿ ದಾಳಿಗೆ ತುತ್ತಾಗಿರುವವರ ಸಂಖ್ಯೆ ಮತ್ತು ಅದಕ್ಕೆ ಪರಿಹಾರ

(268) 160

ಶ್ರೀ ನಾಗರಾಜು ಎಂ.ವಿ (ನೆಲಮಂಗಲ)

ಅ) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಸೋಲೂರು ಹೋಬಳಿಯಲ್ಲಿ ಕರಡಿ ದಾಳಿಗೆ ತುತ್ತಾಗಿ ಮರಣ ಹೊಂದಿರುವವರ ಸಂಖ್ಯೆ

ಎಷ್ಟು; ಮರಣ ಹೊಂದಿರುವವರ ಹೆಸರು ಮತ್ತು ವಿಳಾಸವಾರು ವಿವರಗಳನ್ನು ನೀಡುವುದು;

ಆ) ಮರಣ ಹೊಂದಿದ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ನೀಡದಿದ್ದಲ್ಲಿ, ಕಾರಣಗಳೇನು;

ಇ) ಹಾಗಿದಲ್ಲಿ, ಕರಡಿ ದಾಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಪಿ.ಯೋಗೇಶ್ವರ
(ಮಾನ್ಯ ಅರಣ್ಯ ಸಚಿವರು)

ಅ) ಬೆಂಗಳೂರು ವೃತ್ತ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಕರಡಿ ದಾಳಿಗೆ ತುತ್ತಾಗಿ ಮೃತಪಟ್ಟಿರುವ ಎರಡು ಪ್ರಕರಣಗಳು ವರದಿಯಾಗಿದ್ದು, ವಿವರ ಕೆಳಕಂಡಂತಿದೆ:–

<u>ಮರಣ ಹೊಂದಿರುವವರ ಹೆಸರು ಮತ್ತು ವಿಳಾಸ</u>

ಅ. ಬೆಂಗಳೂರು ಗ್ರಾಮಾಂತರ ಜಿಲ್ಲೆ

ಶ್ರೀ ರಾಜಣ್ಣ ಬಿನ್ ದೊಡ್ಡಯ್ಯ, ಉದುಕುಂಟೆ ಗೊಲ್ಲರಹಟ್ಟಿ ಗ್ರಾಮ, ಸೋಲೂರು ಹೋಬಳಿ, ನೆಲಮಂಗಲ ತಾಲ್ಲೂಕು, ಇವರು ಕರಡಿ ದಾಳಿಗೆ ತುತ್ತಾಗಿ ದಿನಾಂಕ: 25/9/2012 ರಂದು ಮರಣ ಹೊಂದಿರುತ್ತಾರೆ.

ಆ. ರಾಮನಗರ ಜಿಲ್ಲೆ

ಶ್ರೀ ಬಿ.ಎನ್.ಸಿದ್ದಲಿಂಗಪ್ಪ ಬಿನ್ ಲೇಟ್ ಬಸಪ್ಪ, ಮೋಟಗೊಂಡನ–ಹಳ್ಳಿ ಗ್ರಾಮ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು ಇವರು ಕರಡಿ ದಾಳಿಗೆ ತುತ್ತಾಗಿ ದಿನಾಂಕ: 16/1/2013 ರಂದು ಮರಣ ಹೊಂದಿರುತ್ತಾರೆ.

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ಸೋಲೂರು ಹೋಬಳಿಯ ಉಡುಕುಂಟೆ ಗೊಲ್ಲರಹಟ್ಟಿ ಗ್ರಾಮದ ವಾಸಿ ದಿ. ರಾಜಣ್ಣ ಬಿನ್ ದೊಡ್ಡಯ್ಯ ಎಂಬುವರ ವಾರಸುದಾರರಾದ ಶ್ರೀಮತಿ ರತ್ನಮ್ಮ ರವರಿಗೆ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದನ್ವಯ ತಕ್ಷಣ ದಯಾತ್ಮಕ ಧನವಾಗಿ ರೂ. 2.00 ಲಕ್ಷಗಳನ್ನು ಪಾವತಿ ಮಾಡಲಾಗಿದೆ. ಸ್ಥಳೀಯ ಉಪ ಅರಣ್ಯ

ಸಂರಕ್ಷಣಾಧಿಕಾರಿಗಳು ಮೃತರ ವಾರಸುದಾರರಿಗೆ ಬಾಕಿ ಮೊತ್ತ ರೂ. 3.00 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲು ಕ್ರಮ ಕೈಗೊಂಡಿರುತ್ತಾರೆ.

ರಾಮನಗರ ಜಿಲ್ಲೆಯ ಪ್ರಾದೇಶಿಕ ವಿಭಾಗದ ಸೋಲೂರು ಹೋಬಳಿಯ ಮೋಟಗೊಂಡನಹಳ್ಳಿ ಗ್ರಾಮದ ವಾಸಿ ಶ್ರೀ. ಬಿ. ಎನ್. ಸಿದ್ದಲಿಂಗಪ್ಪ ಎಂಬುವರ ವಾರಸುದಾರರಿಗೆ, ನಿಯಮಾನುಸಾರ ರೂ.5.00 ಲಕ್ಷಗಳ ದಯಾತ್ಮಕ ಧನವನ್ನು ಶೀಘ್ರವಾಗಿ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಾಡುಗಳಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸುವುದು, ನೀರಿಗಾಗಿ ಗಲ್ಲಿಚೆಕ್ಸ್, ಚೆಕ್‌ಡ್ಯಾಮ್‌ಗಳನ್ನು ನಿರ್ಮಾಣ ಮಾಡುವುದು ಮತ್ತು ಹೊಂಡಗಳನ್ನು ತೋಡುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಕಾಡಿನ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ಜನರಿಗೆ ಕರಡಿಗಳ ದಾಳಿಗಳ ಬಗ್ಗೆ ಮನವರಿಕೆ ಮಾಡಿ ತಮ್ಮ ಹೊಲ, ಗದ್ದೆಗಳ ಕೆಲಸ ಕಾರ್ಯಗಳಿಗೆ ಹೋಗುವಾಗ ಎಚ್ಚರಿಕೆಯಿಂದ ಹೋಗುವುದು ಸಂಜೆ ವೇಳೆಯಲ್ಲಿ ಆದಷ್ಟು ಬೇಗ ತಮ್ಮ ಮನೆಗಳಿಗೆ ತೆರಳುವಂತೆ ತಿಳುವಳಿಕೆ/ಅರಿವು ಮೂಡಿಸಲಾಗುತ್ತಿದೆ.

ಸುವರ್ಣ ಕರ್ನಾಟಕ ಭವನಕ್ಕೆ ಅನುದಾನ ಬಿಡುಗಡೆ

131 : (348)

ಶ್ರೀ ಡಾ ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ಸುವರ್ಣ ಕರ್ನಾಟಕ ಭವನ ಕಟ್ಟಡಕ್ಕೆ ಇನ್ನೂ ಅನುದಾನ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಟ್ಟಡ ಅರ್ಧಕ್ಕೆ ನಿಂತಿದ್ದು, ಕಳೆದ ಸಾಲಿನಲ್ಲಿ ರೂ.25.00 ಲಕ್ಷ ಬಿಡುಗಡೆ ಮಾಡಲಾಗುವುದೆಂದು ಭರವಸೆ ನೀಡಿದ್ದು, ಆ ಬಗ್ಗೆ ಕೈಗೊಂಡ ಕ್ರಮಗಳೇನು;

ಆ) ಕಟ್ಟಡ ಪೂರ್ಣಗೋಳಿಸಲು ಸರ್ಕಾರವು ತೆಗೆದುಕೊಳ್ಳುತ್ತಿರುವ ಮುಂದಿನ ಕ್ರಮವೇನು?